# ಕಾರ್ಮಿಕರ ಹಕ್ಕುಗಳನ್ನು ಸಾಧಿಸಲು

CPI(M)

## ಸಿಪಿಐ(ಎಂ)ಗೆ ಮತ ನೀಡಿ

## ಎಡಪಕ್ಷಗಳನ್ನು ಬಲಪಡಿಸಿ

: ಪ್ರಕಟಣೆ :

**ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)**

ಕರ್ನಾಟಕ ರಾಜ್ಯ ಸಮಿತಿ

16ನೇ ಲೋಕಸಭಾ ಚುನಾವಣೆಗಳು ಒಂದೆರೆಡು ವಾರಗಳಲ್ಲಿ ನಡೆಯಲಿವೆ. ಈ ಚುನಾವಣೆಯಲ್ಲಿ ಹೊಸ ಸರ್ಕಾರವನ್ನು ಆಯ್ಕೆ ಮಾಡುವ ಪ್ರಕ್ರಿಯೆಯಲ್ಲಿ 72 ಕೋಟಿಗೂ ಹೆಚ್ಚಿನ ಮತದಾರರು ಭಾಗವಹಿಸಲಿದ್ದಾರೆ. ಅದರಲ್ಲಿ 48 ಕೋಟಿ ಕಾರ್ಮಿಕರು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಮತ ಚಲಾಯಿಸಲಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಗಳ ಸಂದರ್ಭ ವ್ಯಾಪಕ ಚರ್ಚೆಗಳನ್ನು ನಡೆಸುವ ಕಾಲಾವಧಿಯಾಗಿದೆ. ಅದರಲ್ಲಿ ಅಧಿಕಾರದಲ್ಲಿರುವ ಪಕ್ಷ ಮತ್ತು ಅದರ ಸಹಯೋಗಿ ಪಕ್ಷಗಳು ಹಾಗೂ ವಿರೋಧ ಪಕ್ಷ ಮತ್ತು ಅದರ ಸಹಯೋಗಿ ಪಕ್ಷಗಳು ಹೇಳಿಕೊಳ್ಳುವ ಸಾಧನೆಗಳು ಮತ್ತು ಪ್ರತಿಪಾದನೆಗಳ ಕುರಿತಾಗಿ ಸಮಗ್ರ ಚರ್ಚೆ ನಡೆಸುವುದು ಅಗತ್ಯ. 16ನೇ ಲೋಕಸಭಾ ಚುನಾವಣೆಯ ಸ್ಪರ್ಧೆಯನ್ನು 2 ವ್ಯಕ್ತಿಗಳು ಹಾಗೂ ಎರಡು ಪಕ್ಷಗಳ ಸ್ಪರ್ಧೆ ಎಂಬಂತೆ ಬಿಂಬಿಸಲಾಗುತ್ತಿದೆ. ದೊಡ್ಡ ಬಂಡವಾಳಗಾರರ ನಿಯಂತ್ರಣದಲ್ಲಿರುವ ಕಾರ್ಪೋರೇಟ್ ಮಾಧ್ಯಮಗಳು ಇಡೀ ಸಂವಾದವನ್ನು ನಮೋ(ನರೇಂದ್ರ ಮೋದಿ), ರಾಗಾ(ರಾಹುಲ್ ಗಾಂಧಿ)ಗೆ ಸೀಮಿತಗೊಳಿಸುವ ಪ್ರಕ್ರಿಯೆಯಲ್ಲಿ ಮುಳುಗಿವೆ. ಈ ಕುಯುಕ್ತಿಗಳು ಉದ್ದೇಶಪೂರ್ವಕವಾಗಿಯೇ ಜನ ಸಾಮಾನ್ಯರ ಪರಿಸ್ಥಿತಿಗಳು ಮತ್ತು ಹಿತಾಸಕ್ತಿಗಳ ಕುರಿತು ಪ್ರಜ್ಞಾಪೂರ್ವಕವಾಗಿ ಚರ್ಚೆ ಆಗದಂತೆ ಮಾಡುವುದಾಗಿದೆ.

ನವ ಉದಾರೀಕರಣ ನೀತಿಗಳನ್ನು ಆರ್ಥಿಕ ವ್ಯವಸ್ತೆಯ ಬೆಳವಣಿಗೆಯ ವಿಷಯಗಳು ಭಾರೀ ಪರಿಣಾಮಕಾರಿಯಾಗಿವೆ ಎಂಬ ಕುರಿತು ಏಕಾಭಿಪ್ರಾಯ ಇದೆ ಎಂಬ ಭ್ರಮೆಯನ್ನು ಉಂಟು ಮಾಡಲು ಪ್ರಯತ್ನಿಸಲಾಗುತ್ತಿದೆ ಮತ್ತು ಈ ಪ್ರಕ್ರಿಯೆಯಲ್ಲಿ ಯಾರು ಹೆಚ್ಚು ಪರಿಣಾಮಕಾರಿಯಾಗಿ ಮುಂದೆ ತೆಗೆದುಕೊಂಡು ಹೋಗಬಲ್ಲರು ಎಂಬುದು ಮಾತ್ರ ಚರ್ಚೆಯ ವಿಷಯವೆಂಬಂತೆ ಬಿಂಬಿಸಲಾಗುತ್ತದೆ. ಜನರ ಬದುಕು ಹಾಗೂ ಬದುಕಿನ ಪ್ರಶ್ನೆಗಳಾದ ಉದ್ಯೋಗ, ಶಿಕ್ಷಣ, ಆರೋಗ್ಯ, ಸಾಮಾಜಿಕ ಭದ್ರತೆ, ಸುರಕ್ಷತೆ ಇತರೆ ವಿಚಾರಗಳನ್ನು ಉದ್ದೇಶಪೂರ್ವಕವಾಗಿ ಕಡೆಗಣಿಸಲಾಗಿದೆ.

## ನಿರುದ್ಯೋಗ

ಯುಪಿಎ ಸರ್ಕಾರದ ಆಡಳಿತಾವಧಿಯಲ್ಲಿ ಉತ್ತಮ ಆರ್ಥಿಕಾಭಿವೃದ್ಧಿ ಸಾಧಿಸಲಾಗಿದೆ ಎಂಬ ಅಬ್ಬರದ ಪ್ರಚಾರದ ನಡುವೆಯೂ ವಾಸ್ತವದಲ್ಲಿ ಉತ್ತಮ ಉದ್ಯೋಗ ಸೃಷ್ಠಿ ಸಾಧ್ಯವಾಗಿಲ್ಲ. 2005–10 ಐದು ವರ್ಷಗಳ ಕಾಲಾವಧಿಯಲ್ಲಿ ವಾರ್ಷಿಕ ಆರ್ಥಿಕಾಭಿವೃದ್ಧಿ ದರ ಶೇ 8.5ರಷ್ಟು ದಾಖಲಾಗಿದ್ದರೂ ಉದ್ಯೋಗ ಬೆಳವಣಿಗೆಯ ಶೇ 0.8ಕ್ಕೆ ಕುಸಿದಿರುತ್ತದೆ.

68ನೇ ಸುತ್ತಿನ ಎನ್.ಎಸ್.ಎಸ್.ಓ ವರದಿಯ ಪ್ರಕಾರ ಯುವಜನತೆಯಲ್ಲಿ ನಿರುದ್ಯೋಗ ಮತ್ತು ಅದರಲ್ಲೂ ಸುಶಿಕ್ಷಿತ ಯುವಜನತೆಯಲ್ಲಿ ನಿರುದ್ಯೋಗ ಹೆಚ್ಚಾಗಿದೆ. ಪರಿಸ್ಥಿತಿಯ ಗಂಭೀರತೆಯನ್ನು ಇತ್ತೀಚಿನ ಪತ್ರಿಕೆಯ ವರದಿಯೊಂದರಿಂದ ಗಮನಿಸಬಹುದು. ಸದರಿ ವರದಿಯ ಪ್ರಕಾರ ಚಂಡೀಗ ಡದ ನ್ಯಾಯಾಲಯದಲ್ಲಿ ಡಿ ಗುಂಪಿನ 21 ಹುದ್ದೆಗಳಿಗಾಗಿ

16000 ಅರ್ಜಿದಾರರನ್ನು ಸಂದರ್ಶನ ಮಾಡಲಾಗಿದೆ. ಶೈಕ್ಷಣಿಕ ಅರ್ಹತೆ 8ನೇ ತರಗತಿ ಆಗಿದ್ದರೂ ಅರ್ಜಿದಾರರಲ್ಲಿ 40 ಮಂದಿ ಸ್ನಾತಕೋತ್ತರ ಪದವೀದರರಾಗಿದ್ದಾರೆ. ಹಾಗೂ ಅದೇ ವರದಿಯಲ್ಲಿ ಮುನಿಸಿಪಾಲಿಟಿಯ ಕಸ ಗುಡಿಸುವ ಕೆಲಸಕ್ಕೆ ಅರ್ಜಿ ಹಾಕಿದವರಲ್ಲಿ 240 ಪದವೀಧರರು ಮತ್ತು ಕೆಲವು ಇಂಜಿನಿಯರಿಂಗ್ ಪದವೀಧರರು ಒಳಗೊಂಡಿದ್ದಾರೆ.

2004–05 ರಿಂದ 2011–12ರ ಕಾಲಾವಧಿಯಲ್ಲಿ ಮಹಿಳಾ ಕಾರ್ಮಿಕರ ಸಂಖ್ಯೆಯು 2 ಕೋಟಿಯಷ್ಟು ಕಡಿಮೆಯಾಗಿದೆ. ಎನ್.ಎಸ್.ಎಸ್.ಓ ವರದಿ ಪ್ರಕಾರ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ತಾತ್ಕಾಲಿಕವಾದ ಕೆಲಸಗಳೂ ಒಳಗೊಂಡಂತೆ ಒಟ್ಟು ಕಾರ್ಯನಿರತರಾದ ಕಾರ್ಮಿಕರ ಸಂಖ್ಯೆ ಒಟ್ಟು 14.85 ಕೋಟಿಗಳಾಗಿವೆ. ಈ ಸಂಖ್ಯೆಯು 2001–12ರಲ್ಲಿ 12.91ಕೋಟಿಗೆ ಕುಸಿದಿದೆ. 2004–05 ಮತ್ತು 2011–12ರ ಅವಧಿಯಲ್ಲಿ ಕೃಷಿ ರಂಗದಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರ ಸಂಖ್ಯೆ 2.6 ಕೋಟಿ ಕಡಿತವಾಗಿದೆ. ಇದಕ್ಕೆ ಕಾರಣ ಮಹಿಳೆಯರು ಕೆಲಸಕ್ಕೆ ಬರದಿರುವುದಲ್ಲ. ಆದರೆ ಅವರಿಗೆ ಕೆಲಸ ದೊರೆತಿರುವುದಿಲ್ಲ.

## ಸಾಂಪ್ರದಾಯಕವಲ್ಲದ ಹುದ್ದೆಗಳ ಹೆಚ್ಚಳ

ಕಾರ್ಮಿಕರಲ್ಲಿ ವಿಶಾಲ ಬಹು ಸಂಖ್ಯಾತರ ಕೆಲಸದ ಪರಿಸ್ಥಿತಿಗಳು ಈ ಕಾಲಾವಧಿಯಲ್ಲಿ ಕ್ಷೀಣಿಸುತ್ತಿವೆ. ಖಾಯಂ ಸ್ವರೂಪದ ಉದ್ಯೋಗ ತೀವ್ರ ಸ್ವರೂಪದಲ್ಲಿ ಕುಸಿಯುತ್ತಿದೆ. ಅಸುರಕ್ಷತೆಯ ಮತ್ತು ಭದ್ರತೆಯಿಲ್ಲದ ಉದ್ಯೋಗಗಳು(ಉದಾಹರಣೆಗೆ ಕಡಿಮೆ ಕೂಲಿಗೆ ಗುತ್ತಿಗೆ ಆಧಾರದಲ್ಲಿ ತಾತ್ಕಾಲಿಕ ಮತ್ತು ಕಾಶ್ಯುವಲ್ ದಿನಗೂಲಿ, ನಿಗದಿತ ಕಾಲದ ಉದ್ಯೋಗ ಮತ್ತು ಹೊರಗುತ್ತಿಗೆ ರೀತಿಯ ಮುಂತಾದ ಉದ್ಯೋಗಗಳು ಹೆಚ್ಚುತ್ತಿವೆ.) ಸರ್ಕಾರ ಮತ್ತು ಸಾರ್ವಜನಿಕ ಕ್ಷೇತ್ರದ ಸಂಘಟಿತ ವಲಯದ ಕೈಗಾರಿಕೆಗಳಲ್ಲೂ ಖಾಯಂ ಕಾರ್ಮಿಕರಿಗಿಂತಲೂ ಗುತ್ತಿಗೆ ಕಾರ್ಮಿಕರ ಸಂಖ್ಯೆ ಹೆಚ್ಚಾಗಿದೆ. ಖಾಸಗೀ ಸಂಘಟಿತ ವಲಯದಲ್ಲಿ ಪರಿಸ್ಥಿತಿ ಮತ್ತಷ್ಟೂ ತೀವ್ರಗೊಂಡಿದೆ. ಖಾಸಗೀ ರಂಗದ ಸಂಘಟಿತ ವಲಯದ ಕೈಗಾರಿಕೆಗಳ ಒಟ್ಟು ಕಾರ್ಮಿಕರಲ್ಲಿ ಶೇ70 ರಿಂದ 80 ಕಾರ್ಮಿಕರು ಗುತ್ತಿಗೆ ಆಧಾರದಲ್ಲಿ ದುಡಿಯುತ್ತಿದ್ದಾರೆ. ಗುತ್ತಿಗೆ ಮತ್ತು ಇತರೆ ಭದ್ರತೆಯಿಲ್ಲದ ಕೆಲಸದಲ್ಲಿ ದುಡಿಯುವ ಕಾರ್ಮಿಕರಿಗೆ ಖಾಯಂ ಕಾರ್ಮಿಕರ ಕೆಲಸ ಮಾಡಿದರೂ ಅದರ ಅರ್ಧ ಅಥವಾ ಕಾಲು ಭಾಗದಷ್ಟು ಮಾತ್ರ ವೇತನ ಪಾವತಿ ಮಾಡಲಾಗುತ್ತದೆ.

ಉದಾಹರಣೆಗೆ 2011ರಲ್ಲಿ ಮಾರುತಿ ಸುಜುಕಿ ಕಂಪನಿಯಲ್ಲಿ 1000 ಖಾಯಂ ಕಾರ್ಮಿಕರು, 800 ತರಬೇತಿ ಹೊಂದುವವರು, 400 ಅಪ್ರೆಂಟಿಸ್‌ಗಳು ಮತ್ತು 1200 ಗುತ್ತಿಗೆ ಕಾರ್ಮಿಕರು ಇದ್ದರು. ಒಟ್ಟು 2400 ಕಾರ್ಮಿಕರಲ್ಲಿ ಶೇ 71 ಕಾರ್ಮಿಕರನ್ನು ಯಾವುದೇ ಭದ್ರತೆಯಿಲ್ಲದ ಕೆಲಸದಲ್ಲಿ ತೊಡಗಿಸಲಾಗಿದೆ. ಕೇವಲ 1000 ಕಾರ್ಮಿಕರು ಅಂದರೆ ಶೇ 29 ಕಾರ್ಮಿಕರು ಖಾಯಂ ಉದ್ಯೋಗ ಹೊಂದಿದ್ದಾರೆ. ಖಾಯಂ ಕಾರ್ಮಿಕರ ಸಂಬಳ ತಿಂಗಳಿಗೆ ರೂ.13000–17000, ತರಬೇತಿ ಕಾರ್ಮಿಕರಿಗೆ ರೂ.8000, ತಾತ್ಕಾಲಿಕ ಕಾರ್ಮಿಕರಿಗೆ 6500 ಮತ್ತು ಅಪ್ರೆಂಟಿಸ್ ಕಾರ್ಮಿಕರಿಗೆ 4000 ಪಾವತಿ ಮಾಡಲಾಗಿದೆ. ಆಮೂಲಕ ಮಾರುತಿ ಸುಜುಕಿ ಕಂಪನಿಯು ಗುತ್ತಿಗೆ ಮತ್ತು ಇತರ ಕಾರ್ಮಿಕರನ್ನು ತೀವ್ರ

ಶೋಷಣೆಗೆ ಒಳಪಡಿಸಿ ಭಾರಿ ಲಾಭಗಳನ್ನು ಗಳಿಸಿದೆ.

ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳಲ್ಲೂ ಗುತ್ತಿಗೆ ಕಾರ್ಮಿಕರ ಪರಿಸ್ಥಿತಿ ಉತ್ತಮವಾಗೇನಿಲ್ಲ. ಭಿಲಾಯ್ ಮತ್ತು ರೂರ್ಕೆಲಾ ಸ್ಟೀಲ್ ಕೈಗಾರಿಕೆಗಳಲ್ಲಿ ಖಾಯಂ ಕಾರ್ಮಿಕರು ಮಾಡುವ ಕೆಲಸಗಳನ್ನು ನಿರ್ವಹಿಸುವ ಗುತ್ತಿಗೆ ಕಾರ್ಮಿಕರಿಗೆ ತಿಂಗಳಿಗೆ ರೂ. 5000 ಮಾತ್ರ ಪಾವತಿಸಲಾಗುತ್ತದೆ. ಅದೇ ಕೆಲಸ ಮಾಡುವ ಖಾಯಂ ಕಾರ್ಮಿಕರಿಗೆ ತಿಂಗಳಿಗೆ ರೂ 30000 ಪಾವತಿಸಲಾಗುತ್ತದೆ. ಮಹಾರಾಷ್ಟ್ರದ ಬಿ.ಎಸ್.ಎನ್.ಎಲ್‌ನಲ್ಲಿ ಗುತ್ತಿಗೆ ಕಾರ್ಮಿಕರಿಗೆ ಕನಿಷ್ಠ ವೇತನದ ಅರ್ಧಕ್ಕೂ ಕಡಿಮೆ ಸಂಬಳ ಅಂದರೆ ರೂ 1500 ಪಾವತಿ ಮಾಡಲಾಗುತ್ತಿದೆ.

ಒರಿಸ್ಸಾ, ಜಾರ್ಖಂಡ್ ಮತ್ತು ಛತ್ತೀಸ್‌ಘಡದ ಕಬ್ಬಿಣ ಅದಿರಿನ ಗಣಿಗಳಲ್ಲಿ ಲಕ್ಷಾಂತರ ಕಾರ್ಮಿಕರು ದುಡಿಯುತ್ತಿದ್ದು, ಅವರಲ್ಲಿ ಬುಡಕಟ್ಟು ಜನ ಮತ್ತು ದಲಿತರು ಬಹುಸಂಖ್ಯಾತರಾಗಿದ್ದಾರೆ. ಯಾಂತ್ರೀಕೃತ ಗಣಿಗಾರಿಕೆ ನಡೆಯುವ ಪ್ರದೇಶಗಳಲ್ಲಿಯೂ ಕೂಡ ದೊಡ್ಡ ದೊಡ್ಡ ಕಬ್ಬಿಣದ ಅದಿರಿನ ಬ್ಲಾಕ್‌ಗಳನ್ನು ದೈಹಿಕವಾಗಿ ತುಂಡು ಮಾಡುವ ಕೆಲಸಗಳನ್ನು ಗಣಿ ಕುಣಿಗಳಿಗೆ ಧಕ್ಕೆಯಾಗದಂತೆ ಗುತ್ತಿಗೆ ಕಾರ್ಮಿಕರನ್ನು ದುಡಿಸಲಾಗುತ್ತಿದೆ. ಕಬ್ಬಿಣದ ಅದಿರಿನ ಉತ್ಪಾದನಾ ವೆಚ್ಚ ಒಂದು ಟನ್ ರೂ.300ಕ್ಕಿಂತ ಕಡಿಮೆ. ಆ ಅದಿರನ್ನು ಒಂದು ಟನ್‌ನ್ನು ರೂ.6000ರಂತೆ ರಫ್ತು ಮಾಡಲಾಗುತ್ತಿದೆ. ಗಣಿ ಮಾಲೀಕರು ಕಾರ್ಮಿಕರನ್ನು ಶೋಷಿಸಿ ಭಾರೀ ಲಾಭ ಗಳಿಸುತ್ತಿದ್ದಾರೆ.

43ನೇ ಭಾರತ ಕಾರ್ಮಿಕ ಸಮ್ಮೇಳನವು ಗುತ್ತಿಗೆ ಕಾರ್ಮಿಕ ಕಾನೂನಿಗೆ ತಿದ್ದುಪಡಿ ಮಾಡಿ ಸಮಾನ ಕೆಲಸಕ್ಕೆ ಸಮಾನ ವೇತನ ಮತ್ತು ಇತರ ಸೌಲಭ್ಯಗಳನ್ನು ಗುತ್ತಿಗೆ ಕಾರ್ಮಿಕರಿಗೆ ಪಾವತಿಸುವಂತೆ ಶಿಫಾರಸ್ಸು ಮಾಡಿದೆ. ಆದರೆ ಯು.ಪಿ.ಎ ಸರ್ಕಾರ ಜಾರಿಗೊಳಿಸಲು ಯಾವುದೇ ಕ್ರಮ ವಹಿಸಲಿಲ್ಲ.

## ಕುಸಿಯುತ್ತಿರುವ ವೇತನದ ಪಾಲು: ಏರುತ್ತಿರುವ ಲಾಭದ ಪಾಲು: ವೇತನದ ಪಾಲು ಶೇ 10... ಲಾಭದ ಪಾಲು ಶೇ 90.....

ಉದ್ಯೋಗದ ಸ್ವರೂಪದಲ್ಲಿ ಖಾಯಂ ಕಾರ್ಮಿಕರ ಜಾಗದಲ್ಲಿ, ಇಡೀ ವರ್ಷ ನಿರ್ವಹಿಸಬೇಕಾದ ಕೆಲಸಗಳಲ್ಲಿ ಗುತ್ತಿಗೆ, ಕ್ಯಾಜುಯಲ್, ತಾತ್ಕಾಲಿಕ, ಅಪ್ರೆಂಟಿಸ್, ನಿಗದಿತ ಅವಧಿಯ ಕಾರ್ಮಿಕರು ಮುಂತಾಗಿ ದುಡಿಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಒಟ್ಟಾರೆ ವೇತನದ ಪಾಲು ತೀವ್ರಗತಿಯಲ್ಲಿ ಕುಸಿತವಾಗುತ್ತಿದ್ದೂ, ಅಂತಹ ಕಡಿಮೆ ವೇತನದ ಪರಿಸ್ಥಿತಿಗಳಲ್ಲಿ ಮಾಲೀಕರ ಲಾಭದ ಪಾಲು ತೀವ್ರವಾಗಿ ಏರಿಕೆ ಆಗುತ್ತಿದೆ.

1981–82 ರಲ್ಲಿ ಕಾರ್ಖಾನೆಗಳಲ್ಲಿ ಒಟ್ಟು ಮೌಲ್ಯ ಸೇರ್ಪಡೆಯಲ್ಲಿ ನಿವ್ವಳ ವೇತನದ ಪಾಲು ಶೇ 30.28 ಇದ್ದದ್ದು 1992–93 ರಲ್ಲಿ ಶೇ 19.90 ಕ್ಕೆ ಕುಸಿದಿದೆ ಮತ್ತು 2007–08 ರಲ್ಲಿ ಶೇ 10.60 ಮಟ್ಟಕ್ಕೆ ಕಡಿತವಾಗಿದೆ. ಅಂದರೆ ಮೌಲ್ಯ ಸೇರ್ಪಡೆಯ ನಿವ್ವಳ ಪ್ರಮಾಣದಲ್ಲಿ ಸುಮಾರು ಶೇ 90 ಮಾಲೀಕರು ಲಾಭವಾಗಿ ಕಸಿದುಕೊಂಡಿದ್ದಾರೆ. 1990–91 ರಲ್ಲಿ ಸಂಘಟಿತ ಕೈಗಾರಿಕಾ ವಲಯದಲ್ಲಿ ಸರಾಸರಿ ನಿಕರವಾದ ಕೂಲಿ ರೂ.108.41 ರಿಂದ 2010–11 ರಲ್ಲಿ ರೂ. 103.76 ಕ್ಕೆ ಕುಸಿದಿದೆ.

ಈ ಎಲ್ಲಾ ಲಾಭಾಂಶವು ಕೆಲವೇ ಕಾರ್ಪೊರೇಟ್ ಬಂಡವಾಳಗಾರರ ಕೈಯಲ್ಲಿ ಕೇಂದ್ರೀಕೃತವಾಗಿದೆ. 2005–06 ರಲ್ಲಿ ಒಟ್ಟು 301736 ಕಂಪನಿಗಳಲ್ಲಿ ರೂ.500 ಕೋಟಿಗೂ ಹೆಚ್ಚಿನ ಲಾಭ ಗಳಿಸಿದ ಕಂಪನಿಗಳು 113 ಮಾತ್ರ. ಶೇ 49.87 ತೆರಿಗೆ ಪೂರ್ವ ಲಾಭವನ್ನು ಸೂರೆಗೊಂಡಿವೆ. ಸಮೀಕ್ಷೆ ನಡೆಸಿದ ಕಂಪನಿಗಳಲ್ಲಿ ಶೇ 0.04 ರಷ್ಟು ಕಂಪನಿಗಳು ಶೇ 49.87ರಷ್ಟು ಒಟ್ಟು ಲಾಭಾಂಶವನ್ನು ಪಡೆದಿವೆ 2010–11ರಲ್ಲಿ ಸಮೀಕ್ಷೆಗೊಳಪಡಿಸಿದ ಕಂಪನಿಗಳಲ್ಲಿ ಶೇ 0.05ರಷ್ಟು ಕಂಪನಿಗಳು ಶೇ 57.92ರಷ್ಟು ಒಟ್ಟು ತೆರಿಗೆ ಪೂರ್ವ ಲಾಭಗಳನ್ನು ಪಡೆದಿವೆ. ವಾಸ್ತವಾಂಶವೆಂದರೆ ಒಂದೇ ಕಾರ್ಪೊರೇಟ್ ಸಮೂಹಕ್ಕೆ ಸೇರಿದ ಹಲವು ಕಂಪನಿಗಳು ಒಳಗೊಂಡಿದ್ದು, ಕೇವಲ 10 ಕಾರ್ಪೊರೇಟ್ ಸಮೂಹಗಳು ಶೇ 60ರಷ್ಟು ಲಾಭಾಂಶವನ್ನು ಗಳಿಸಿದ್ದು, ಯು.ಪಿ.ಎ–2ರ ಆಡಳಿತಾವಧಿಯಲ್ಲಿ ಸಂಪತ್ತಿನ ಕೇಂದ್ರೀಕರಣದ ಪ್ರಮಾಣವನ್ನು ಸೂಚಿಸುತ್ತದೆ.

## ಸರ್ಕಾರಿ ಯೋಜನೆಗಳ ಪಿತೂರಿ

ಇಡೀ ಜಗತ್ತಿನಲ್ಲಿ ಭಾರತವು ನಾಗರೀಕರ ಮೂಲಭೂತ ಅವಶ್ಯಕತೆಗಳಾದ ಆರೋಗ್ಯ, ಶಿಕ್ಷಣ, ಪೌಷ್ಠಿಕತೆ ಮತ್ತು ಮಕ್ಕಳ ಆರೈಕೆಗಳನ್ನು ಜನರ ಹಕ್ಕುಗಳಾಗಿ ಒದಗಿಸುವ ಬದಲಾಗಿ ಹಲವಾರು "ಯೋಜನೆಗಳ" ಹೆಸರಿನಲ್ಲಿ ಜಾರಿಗೊಳಿಸಲಾಗುತ್ತಿದೆ. ಸರ್ಕಾರವು ಹಲವು ಯೋಜನೆಗಳನ್ನು ಆರಂಭಿಸಿದೆ. ಅವುಗಳನ್ನು ವಿಶಿಷ್ಟ ಹಾಗೂ ಆದ್ಯತೆಯ ಯೋಜನೆಗಳೆಂದು ಬಿಂಬಿಸಲಾಗಿದೆ. ಸಮಗ್ರ ಬಾಲ ಯೋಜನೆ(ಐಸಿಡಿಎಸ್), ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಯೋಜನೆ(ಎನ್.ಆರ್.ಹೆಚ್.ಎಮ್), ಮಧ್ಯಾಹ್ನದ ಬಿಸಿಯೂಟದ ಯೋಜನೆ, ಸರ್ವ ಶಿಕ್ಷಾ ಯೋಜನೆ ಮತ್ತು ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆ ಇತ್ಯಾದಿ. ಈ ಎಲ್ಲಾ ಯೋಜನೆಗಳಲ್ಲಿ ಸುಮಾರು ಒಂದು ಕೋಟಿ ಕಾರ್ಮಿಕರು ಅದರಲ್ಲೂ ಬಹುತೇಕ ಮಹಿಳಾ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ಸರ್ಕಾರವು ಸದರಿ ಕಾರ್ಮಿಕರಿಗೆ ಕನಿಷ್ಠ ವೇತನ ಮತ್ತು ಸಾಮಾಜಿಕ ಕಲ್ಯಾಣ ಸೌಲಭ್ಯಗಳನ್ನು ನಿರಾಕರಿಸುವ ಕುತಂತ್ರವನ್ನು ರೂಪಿಸಿದೆ. ಇವರನ್ನು "ಕಾರ್ಮಿಕರು" ಎಂದು ಮಾನ್ಯತೆ ನೀಡಲು ನಿರಾಕರಿಸಲಾಗುತ್ತಿದೆ. ಸಾಮಾಜಿಕ ಕಾರ್ಯಕರ್ತರು, ಗೌರವ ಧನ ಪಡೆಯುವವರು, ಆಶಾಗಳು, ಉಶಾಗಳು, ಯಶೋಧಗಳು, ಮಮತಗಳು ಇತ್ಯಾದಿ ಹೆಸರಿನಲ್ಲಿ ಕರೆದು ಅವರ ನಿಜವಾದ ದೀನ ಪರಿಸ್ಥಿತಿಗಳನ್ನು ಮಾರೆ ಮಾಚಲು ಹವಣಿಸಲಾಗುತ್ತಿದೆ. ಈ ಕಾರ್ಮಿಕರಲ್ಲಿ ಕೆಲವು ವಿಭಾಗಗಳಿಗೆ ಅತ್ಯಲ್ಪ ರೂ.1000 ರಿಂದ 4000ವರೆಗೆ ಗೌರವ ಧನವೆಂದು ಪಾವತಿಸಲಾಗುತ್ತದೆ. ಇನ್ನು ಇತರ ವಿಭಾಗಗಳಿಗೆ ಈ ಮೊತ್ತವೂ ಸಿಗುತ್ತಿಲ್ಲ. ಆಶಾಗಳು ಮತ್ತು ಉಶಾಗಳಿಗೆ ತುಂಡು ದರದ ಪ್ರೋತ್ಸಾಹ ಧನ ಹೆಸರಲ್ಲಿ ತಿಂಗಳಿಗೆ ರೂ. 1000 ಕೂಡ ದೊರೆಯುತ್ತಿಲ್ಲ.

45ನೇ ಭಾರತ ಕಾರ್ಮಿಕ ಸಮ್ಮೇಳನವು ಈ ಸ್ಕೀಂ(ಯೋಜನೆಯ) ಕಾರ್ಮಿಕರನ್ನು " ಕಾರ್ಮಿಕರು" ಎಂದು ಮಾನ್ಯತೆ ನೀಡಬೇಕೆಂದು ಕನಿಷ್ಠ ವೇತನ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳು, ಪಿಂಚಣಿ ಮತ್ತು ಗ್ರಾಚ್ಯುಟಿ(ಉಪಧನ) ಕೊಡಬೇಕೆಂದು ಶಿಫಾರಸ್ಸು ಮಾಡಿದ್ದರೂ ಯು.ಪಿ.ಎ–2 ಸರ್ಕಾರ ಸದರಿ ಶಿಫಾರಸ್ಸುಗಳನ್ನು ಜಾರಿಗೊಳಿಸಲು ಯಾವುದೇ ಕ್ರಮಗಳನ್ನು ಕೈಗೊಂಡಿರುವುದಿಲ್ಲ. ಹಾಗೆಯೇ ಮಹಿಳಾ ಸಬಲೀಕರಣದ ಕುರಿತ

ಪಾರ್ಲಿಮೆಂಟರಿ ಸ್ಥಾಯಿ ಸಮಿತಿಯು ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ಬೆಲೆಯೇರಿಕೆಯ ಸೂಚ್ಯಂಕ ಆಧರಿಸಿ ಕನಿಷ್ಠ ವೇತನ ನೀಡಬೇಕೆಂದು ಶಿಫಾರಸ್ಸು ಮಾಡಿದ್ದರೂ, ಸರ್ಕಾರ ಸಂಪೂರ್ಣ ನಿರ್ಲಕ್ಷ್ಯ ವಹಿಸಿದೆ.

ಸರ್ಕಾರವು ಈ ಲಕ್ಷಾಂತರ ಕಾರ್ಮಿಕರಿಗೆ ಯಾವುದೇ ಹೆಚ್ಚುವರಿ ವೇತನ ಪಾವತಿಸದೇ ಹಲವು ಇಲಾಖೆಗಳ ಕೆಲಸವನ್ನು ಕಡ್ಡಾಯವಾಗಿ ಹೇರಿ ಗ್ರಾಮ ಮಟ್ಟದಲ್ಲಿ ಜನ ಗಣತಿ, ಸರ್ವೇ, ವೃದ್ಧಾಪ್ಯ ವೇತನ ವಿತರಣೆ ಮತ್ತು ಇತರೆ ಸೌಲಭ್ಯಗಳ ವಿತರಣೆ ಕೆಲಸಗಳನ್ನು ಮಾಡಿಸಲಾಗುತ್ತಿದೆ. ಇಂತಹ ಕೆಲಸಗಳನ್ನು ನಿರ್ವಹಿಸಲು ಅಗತ್ಯವಾದ ಲಕ್ಷಾಂತರ ನೇಮಕಾತಿಗಳನ್ನು ಮಾಡದೇ ಸ್ಕೀಂ ಕಾರ್ಮಿಕರ ಮೂಲಕ ಬಿಟ್ಟಿ ಚಾಕರಿ ಮಾಡಿಸಿಕೊಳ್ಳಲಾಗುತ್ತಿದೆ. ಮತ್ತೊಂದೆಡೆ ದೇಶದ ದೊಡ್ಡ ಮತ್ತು ಬಹುರಾಷ್ಟ್ರೀಯ ಕಾರ್ಪೋರೇಟ್ ಸಂಸ್ಥೆಗಳಿಗೆ ಲಕ್ಷಾಂತರ ಕೋಟಿ ರೂಪಾಯಿಗಳ ರಿಯಾಯ್ತಿಗಳನ್ನು ನೀಡಿ ಬಡ ಕಾರ್ಮಿಕರಿಗೆ ಅನ್ಯಾಯ ಮಾಡಲಾಗುತ್ತಿದೆ.

## ಕಾರ್ಮಿಕರ ಮೇಲೆ ಹೆಚ್ಚುತ್ತಿರುವ ಧಾಳಿಗಳು

ಕಾರ್ಮಿಕ ಕಾನೂನುಗಳಿಗೆ ಮಹತ್ವದ ತಿದ್ದುಪಡಿಗಳನ್ನು ಮಾಡಲು ಜಂಟಿ ಕಾರ್ಮಿಕ ಚಳುವಳಿ ಒತ್ತಾಯ ಮಾಡಿದರೂ ಗಮನ ನೀಡದ ಸರಕಾರವು, ದೇಶದಲ್ಲಿ ಕಾರ್ಮಿಕ ಕಾನೂನುಗಳ ಬಹಿರಂಗ ಉಲ್ಲಂಘನೆಗೆ ಸಹಕಾರ ನೀಡುತ್ತಿದೆ. ಹಲವಾರು ಖಾಸಗಿ ಕೈಗಾರಿಕೆಗಳಲ್ಲಿ 10–12 ಗಂಟೆಗಳ ಕೆಲಸ ಆದರೆ ಯಾವುದೇ ಹೆಚ್ಚುವರಿ ವೇತನವಿಲ್ಲದೇ ದುಡಿಸಿಕೊಳ್ಳುವುದು ಸಾಮಾನ್ಯವಾಗಿದೆ. ಈ ಕಾಲಾವಧಿಯಲ್ಲಿ ಕಾರ್ಮಿಕರು ಸಂಘಟಿತವಾಗುವುದನ್ನು ಮತ್ತು ಹಕ್ಕುಗಳಿಗಾಗಿ ಹೋರಾಟ ನಡೆಸುವುದನ್ನು ಸಹಿಸಲಾಗದ ವಾತಾವರಣ ಹೆಚ್ಚಾಗಿದೆ. ಐಎಲ್ಓ ಠರಾವುಗಳಾದ ಸಂಘಟನಾ ಹಕ್ಕು( 87) ಮತ್ತು ಸಮೂಹಿಕ ಚೌಕಾಸಿ(98)ಗಳನ್ನು ಭಾರತ ಸರಕಾರವು ಅನುಮೋದನೆ ಮಾಡಿಲ್ಲ. ಮನೆಸಾರ್ ಕಾರ್ಖಾನೆಯಲ್ಲಿ ಕಾರ್ಮಿಕರ ಮೂಲಭೂತ ಹಕ್ಕಾಗಿರುವ, ಅವರ ಆಯ್ಕೆಯ ಸಂಘಕ್ಕೆ ಸದಸ್ಯರಾಗುವ ಹಕ್ಕನ್ನು ನಿರಾಕರಿಸಲಾಗಿದೆ. ಹರಿಯಾಣದ ಕಾಂಗ್ರೆಸ್ ಸರಕಾರವು ಆಡಳಿತ ವರ್ಗಕ್ಕೆ ಸಂಪೂರ್ಣ ಬೆಂಬಲ ನೀಡಿ ಕಾರ್ಮಿಕರ ಮೇಲೆ ಬರ್ಬರವಾದ ಆಕ್ರಮಣವನ್ನು ನಡೆಸಿ ಕಾರ್ಮಿಕರ ಹೋರಾಟವನ್ನು ದಮನಗೊಳಿಸಲು ಮುಂದಾಗಿದೆ. ಇಂದಿಗೂ 150ಕ್ಕೂ ಹೆಚ್ಚಿನ ಕಾರ್ಮಿಕರು ಸುಳ್ಳು ಮೊಕದ್ದಮೆಗಳಲ್ಲಿ ಜೈಲುವಾಸ ಅನುಭವಿಸುತ್ತಿದ್ದಾರೆ, ನ್ಯಾಯಾಲಯಗಳು ಜಾಮೀನು ನೀಡಲು ನಿರಾಕರಿಸುತ್ತಿವೆ.

ಇದು ಏಕಾಂಗಿ ಪ್ರಕರಣವಲ್ಲ. ಇಂತಹ ಪೋಲಿಸ್ ಸುಳ್ಳು ಪ್ರಕರಣಗಳು, ಬಂಧನ, ಜೈಲುವಾಸ, ದೈಹಿಕ ಧಾಳಿಗಳು, ಕೊಲೆ ಪ್ರಯತ್ನಗಳು ಅಲ್ಲದೇ ಕಾರ್ಮಿಕರ ಮೇಲೆ ಸೇಡಿನ ಕ್ರಮಗಳನ್ನು ಕೈಗೊಳ್ಳುವುದು ಇಡೀ ದೇಶದಲ್ಲಿ ನಡೆಯುತ್ತಿದೆ. ಆಂಧ್ರಪದೇಶದ ರೆಡ್ಡಿ ಲ್ಯಾಬ್, ತಮಿಳನಾಡಲ್ಲಿ ಹುಂಡೈ ಮತ್ತು ಫಾಕ್ಸಕಾನ್, ಮಹಾರಾಷ್ಟ್ರದ ನಾಶಿಕ್‌ನಲ್ಲಿ ಕೈಗಾರಿಕಾ ಪ್ರದೇಶಗಳಲ್ಲಿ, ಹಿಮಾಚಲ ಪ್ರದೇಶದ ಹೈಡ್ರೋ ಪವರ್ ಪ್ರಾಜೆಕ್ಟ್‌ಗಳಲ್ಲಿ ಇಂತಹ ಧಾಳಿಗಳು ನಿರಂತರವಾಗಿ ನಡೆಯುತ್ತಿವೆ.

ಕನಿಷ್ಟ ವೇತನಗಳನ್ನು ಪಾವತಿ ಮಾಡದಿರುವುದು, ಕಾನೂನು ಬದ್ಧವಾಗಿ ಸಮಾನ ವೇತನ ಪಾವತಿ ನಿರಾಕರಣೆ, ಹೆರಿಗೆ ಭತ್ಯೆಗಳ ಪಾವತಿಗೆ ನಿರಾಕರಣೆಗಳು ಕಾರ್ಮಿಕ ಇಲಾಖೆಯ ಶಾಮೀಲಾತಿಯೊಂದಿಗೆ ನಿತ್ಯನಿರಂತರವಾಗಿವೆ.

ಆಹಾರ ಪದಾರ್ಥಗಳ ಬೆಲೆ ಏರಿಕೆ ಹಾಗೂ ಅಗತ್ಯ ವಸ್ತುಗಳ ಬೆಲೆಗಳ ಏರಿಕೆ, ವೇತನಗಳ ಸ್ಥಗಿತತೆ, ಉದ್ಯೋಗ ಭದ್ರತೆಯ ಕೊರತೆ ಮತ್ತು ಸಾಮಾಜಿಕ ಭದ್ರತೆ ರಾಹಿತ್ಯಗಳು, ಕಾರ್ಮಿಕರ ಜೀವನ ಪರಿಸ್ಥಿತಿಗಳ ಕ್ಷೀಣತೆಗಳು ಕಾರ್ಮಿಕರಲ್ಲಿ ತೀವ್ರತರವಾದ ಕೋಪ ಮತ್ತು ಅಸಂತೃಪ್ತಿಗೆ ಕಾರಣವಾಗುತ್ತಿದೆ. ಇದರ ಪರಿಣಾಮಗಳು 2009 ರಿಂದ ನಡೆಯುತ್ತಿರುವ ಮುಷ್ಕರಗಳಲ್ಲಿ ಕಾರ್ಮಿಕರ ಭಾಗವಹಿಸುವಿಕೆ ಹೆಚ್ಚುತ್ತಿರುವುದರಲ್ಲಿ ಪ್ರತಿಫಲವಾಗುತ್ತಿದೆ. ಕಾಂಗ್ರೆಸ್ ಸರಕಾರದ ವಿರುದ್ಧ ಕಾರ್ಮಿಕರ ಮತ್ತು ಜನ ಸಾಮಾನ್ಯರ ಕೋಪ ಮತ್ತು ಅಸಂತೃಪ್ತಿಗಳು ವಿವಿಧ ರಾಜ್ಯಗಳಲ್ಲಿ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ ಸೋಲಿಗೆ ಕಾರಣವಾಗಿದೆ ಮತ್ತು ಬಿಜೆಪಿ ಪಕ್ಷವು ಲೋಕಸಭಾ ಚುನಾವಣೆಗಳಲ್ಲಿ ಜಯಗಳಿಸುವ ಕನಸು ಕಾಣುವಂತೆ ಮಾಡಿದೆ. ಆರ್.ಎಸ್.ಎಸ್. ನಿರ್ದೇಶನದಂತೆ ನರೆಂದ್ರ ಮೋದಿಯನ್ನು ಪ್ರಧಾನ ಮಂತ್ರಿ ಅಭ್ಯರ್ಥಿಯಾಗಿ ಬಿಜೆಪಿ ತೀರ್ಮಾನಿಸಿದೆ. ಬಿಜೆಪಿಯ ಗೆಲುವಿನ ಕಡೆಗೆ ಅನುಕೂಲವಾಗಲು ಆರ್.ಎಸ್.ಎಸ್. ತನ್ನ ವಿವಿಧ ಸಂಘಗಳ ಮೂಲಕ ಕೋಮು ಗಲಭೆಗಳನ್ನು ಪ್ರೇರೇಪಿಸಲು ಮತ್ತು ಜನರನ್ನು ಕೋಮುಗಳ ಆಧಾರದಲ್ಲಿ ಸಮೀರಕರಣಗೊಳಿಸಲು ಹವಣಿಸಲಾಗುತ್ತಿದೆ. ದೊಡ್ಡ ಬಂಡವಾಳಗಾರ ಕಾರ್ಪೊರೇಟ್ ಕಂಪನಿಗಳು ಮೋದಿಯ ಸರ್ವಾಧಿಕಾರಿ ಪ್ರವೃತ್ತಿಗಳ ಮೂಲಕ ನವ ಉದಾರೀಕರಣ ಸುಧಾರಣೆಗಳ ವಿರೋಧಿ ಪ್ರಯತ್ನಗಳನ್ನು ಕ್ರೂರವಾಗಿ ಹತ್ತಿಕ್ಕಲು ಅನುಕೂಲವಾಗುತ್ತಿದೆಂದು ಭಾವಿಸುತ್ತಿವೆ ಮತ್ತು ಆ ಮೂಲಕ ಅವರ ಲಾಭಗಳನ್ನು ಹೆಚ್ಚಿಸಿಕೊಳ್ಳುವುದಷ್ಟೇ ಅಲ್ಲ, ಪ್ರಭುತ್ವದ ಮೇಲೆ ತಮ್ಮ ಹಿಡಿತವನ್ನು ಗಟ್ಟಿಗೊಳಿಸಿಕೊಳ್ಳಲು ನರೇಂದ್ರ ಮೋದಿಗೆ ಬೆಂಬಲವಾಗಿ ನಿಂತಿವೆ.

## ಗುಜರಾತ್ ಮಾದರಿಯ ಭ್ರಮೆ

ಬಿಜೆಪಿ ಮತ್ತು ಮೋದಿಯನ್ನು ವೈಭವೀಕರಿಸಲು ಗುಜರಾತ್ ಮಾದರಿಯ ಅಭಿವೃದ್ಧಿ ಮತ್ತು ಆಡಳಿತವನ್ನು ಕಾರ್ಪೊರೇಟ್ ನಿಯಂತ್ರಿತ ಮಾಧ್ಯಮಗಳು ಭ್ರಮೆ ಉಂಟು ಮಾಡುವ ಪ್ರಚಾರದಲ್ಲಿ ತೊಡಗಿವೆ. ಕಾರ್ಪೊರೇಟ್ ಹಿತಾಸಕ್ತಿಗಳನ್ನು ಪರಿಣಾಮಕಾರಿಯಾಗಿ ಮುಂದೆ ಕೊಂಡೊಯ್ಯುವ ಶಕ್ತಿಗಳನ್ನು ಬೆಂಬಲಿಸುವ ಬರದಲ್ಲಿ, 2002ರಲ್ಲಿ ಗುಜರಾತ್‌ನಲ್ಲಿ ನಡೆದ ಕೋಮು ದಳ್ಳುರಿಯಲ್ಲಿ ಮತ್ತು ಸಾವಿರಾರು ಮುಸ್ಲಿಂ ಮಾರಣ ಹೋಮ, ನೂರಾರು ಮುಸ್ಲಿಂ ಮಹಿಳೆಯರ ಮಾನಭಂಗ ಮತ್ತು ಕೊಲೆಗಳಲ್ಲಿ ಮೋದಿಯ ಪಾತ್ರವನ್ನು ಉದ್ದೇಶಪೂರ್ವಕವಾಗಿಯೇ ಮರೆಮಾಚಲಾಗುತ್ತದೆ.

ಗುಜರಾತ್ ಮಾದರಿ ಅಭಿವೃದ್ಧಿಯ ವಿವರಗಳಿಗೆ ಹೋಗುವ ಮೊದಲು ಮೋದಿ ಕುರಿತ ಪುಸ್ತಕದಲ್ಲಿ ಪ್ರಸ್ತಾಪಿಸಿದ ಆರ್ಥಿಕ ಕಣ್ನೋಟ ಕುರಿತು ಗಮನಿಸುವುದು ಪ್ರಸ್ತುತವಾಗುತ್ತದೆ. ರಾಜ್ಯ ಸಭೆಯಲ್ಲಿ ಬಿಜೆಪಿ ನಾಯಕರಾಗಿರುವ ಅರುಣ್ ಜೆಟ್ಲೆ ಬಿಡುಗಡೆಗೊಳಿಸಿದ ಪುಸ್ತಕವು,

ಬಿಜೆಪಿ ಪ್ರಧಾನಿ ಅಭ್ಯರ್ಥಿ ಮೋದಿಯಿಂದ ಅನುಮೋದಿತವಾಗಿದೆ ಎಂದು ಹೇಳಲಾದ ಪುಸ್ತಕ "ಮೋದಿನಾಮಿಕ್ಸ್"– "ಒಳಗೊಂಡಿರುವ ಆರ್ಥಿಕತೆ, ಒಳಗೊಂಡಿರುವ ಆಡಳಿತ." ಸದರಿ ಪುಸ್ತಕದಲ್ಲಿ ಹೇಳಿರುವಂತೆ ಮೋದಿ ಆರ್ಥಿಕ ಕಣ್ಣೋಟವು ಚಿದಂಬರಂ ಆರ್ಥಿಕ ಕಣ್ಣೋಟಕ್ಕೆ ಸಮನಾಗಿರುತ್ತದೆ. ನವಉದಾರೀಕರಣ ನೀತಿಗಳನ್ನು ಅನುಷ್ಠಾನಗೊಳಿಸುವುದಾಗಿದೆ. ಅಭಿಪ್ರಾಯಗಳು ಬಿನ್ನವಾಗಿರಬಹುದು 'ಅದರೆ ಆರ್ಥಿಕತೆ ಒಂದೆ' ಇಬ್ಬರು ವ್ಯಾಪಾರಿ ದೃಷ್ಟಿಯಿಂದ ಆರ್ಥಿಕ ಮತ್ತು ಆಡಳಿತ ಕಣ್ಣೋಟ ಹೊಂದಲಾಗಿದೆ.

ಮೇಲಿನ ಅಭಿಪ್ರಾಯವು ಗುಜರಾತ್‌ನಲ್ಲಿ ಮೊದಿ ಆಡಳಿತ ನಿರ್ವಹಣೆಯು ಸಾಬೀತು ಮಾಡಿದೆ.

ಉದಾರೀಕರಣದ ಪ್ರಕ್ರಿಯೆಯಲ್ಲಿ ಗುಜರಾತ್ ಭಾರತದ ಅತ್ಯಂತ ವೇಗವಾಗಿ ಅಭಿವೃದ್ಧಿ ಹೊಂದಿದ ರಾಜ್ಯವಾಗಿ ಹೊರಹೊಮ್ಮಿದೆ. ಆದರೆ, ಒಟ್ಟಾರೆ ಒತ್ತು ಇರುವುದು ಹೂಡಿಕೆಗಳನ್ನು ಆಕರ್ಷಿಸುವುದು, ವ್ಯಾಪಾರ ಸ್ನೇಹಿ ವಾತಾವರಣವನ್ನು ನಿರ್ಮಾಣ ಮಾಡುವುದಾಗಿದೆ. ಇದರಲ್ಲಿ ಕಾರ್ಮಿಕರ ಮತ್ತು ಜನಸಾಮಾನ್ಯರ ಪರಿಸ್ಥಿತಿಗಳ ಉತ್ತಮ ಪಡಿಸುವ ಯಾವುದೇ ಗಮನವಿಲ್ಲ.

ಇತ್ತೀಚಿಗೆ ರಿಜರ್ವ್ ಬ್ಯಾಂಕು ಗವರ್ನರ್ ಅವರ ಅಧ್ಯಕ್ಷತೆಯಲ್ಲಿರುವ ಸಮಿತಿ–'ರಾಜ್ಯಗಳ ಕುರಿತು ಸಂಯುಕ್ತ ಸೂಚ್ಯಂಕ ರೂಪಿಸುವ ಸಮಿತಿ'– ಬಿಡುಗಡೆಗೊಳಿಸಿದ ವರದಿಯ ಗುಜರಾತ್ ಮಾದರಿ ಅಭಿವೃದ್ಧಿ ಕುರಿತ ಭ್ರಮೆಯನ್ನು ಬಯಲು ಮಾಡಿದೆ. ಸದರಿ ಸೂಚ್ಯಂಕದಂತೆ ಗುಜರಾತ್ ರಾಜ್ಯವು 12ನೇ ಸ್ಥಾನದಲ್ಲಿ ಗುರುತಿಸಲಾಗಿದೆ. ರಾಜ್ಯದಲ್ಲಿ ಬೆಳವಣಿಗೆ ಏನಾಗಿದೆ ಅಂದರೆ ಅದು ಕೇವಲ ಕಾರ್ಪೊರೇಟ್ ಸಂಸ್ಥೆಗಳ ಬೆಳವಣಿಗೆ ಮಾತ್ರವಾಗಿದೆ.

ಸಣ್ಣ ವ್ಯಾಪರಿಗಳನ್ನು, ಬೀದಿ ವ್ಯಾಪಾರಿಗಳನ್ನು ಆಕರ್ಷಣೆ ಮಾಡುವ ದಿಶೆಯಲ್ಲಿ ನರೇಂದ್ರ ಮೋದಿ ತನ್ನನ್ನು ತಾನು ಚಾಯ್‌ವಾಲಾ ಎಂದು ಕರೆದುಕೊಳ್ಳುವ ಮೂಲಕ ಪ್ರಯತ್ನಿಸುತ್ತಿದ್ದಾರೆ. ಆದರೆ ಮೋದಿ ಸರಕಾರದ ನೀತಿಗಳು ಸಣ್ಣ ವ್ಯಾಪಾರಿಗಳಿಗೆ ಅಥವಾ ಸಣ್ಣ ಕೈಗಾರಿಕೆಗಳಿಗೆ ಲಾಭದಾಯಕವಾಗಿಲ್ಲ. ಒಂದು ಅಧಿಕೃತ ವರದಿ ಪ್ರಕಾರ ಮೋದಿ ಸರಕಾರದ ಬಜೆಟ್‌ನ ಶೇ 40 ರಷ್ಟು ಮೊತ್ತವು ದೊಡ್ಡ ಕೈಗಾರಿಕೆಗಳಿಗೆ ಮತ್ತು ಮೂಲ ಸೌಕರ್ಯ ಪ್ರಾಜೆಕ್ಟ್‌ಗಳಿಗೆ ನೀಡುವ ರಿಯಾಯತಿ ಹಣವಾಗಿದೆ. ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ನೀಡಿದ ಪ್ರೋತ್ಸಾಹಕಗಳ ಮೊತ್ತವು ಶೇ 2.3 ರಷ್ಟಿದೆ.

ಗುಜರಾತ್‌ನಲ್ಲಿ ದೊಡ್ಡ ಕೈಗಾರಿಕೆಗಳಿಗೆ ಅತ್ಯಂತ ಅಗ್ಗದ ಬೆಲೆಯಲ್ಲಿ ರೈತರಿಂದ ಭೂಮಿಯನ್ನು ಕಿತ್ತು ಕೊಡಲಾಗುತ್ತಿದೆ. ರಾಜ್ಯ ವಿಧಾನ ಸಭೆಯಲ್ಲಿ ಕೊಟ್ಟಿರುವ ಮಾಹಿತಿಯಂತೆ 'ಅದಾನಿ' ಗುಂಪಿನ ಕೈಗಾರಿಕೆಗಳಿಗಾಗಿ 5465 ಹೆಕ್ಟಾರ್ ಅಂದರೆ 54.6 ಚದರ ಕಿ.ಮಿ. ಭೂಮಿಯನ್ನು ಕೇವಲ ರೂ.60 ಕೋಟಿ ಬೆಲೆಯಲ್ಲಿ ಅಂದರೆ ರೂ.10000 ಒಂದು ಹೆಕ್ಟೆರ್ (2.5 ಎಕರೆ) ನಂತೆ ನೀಡಲಾಗಿದೆ. ಆದರೆ ಭೂಮಿಯ ಮಾರುಕಟ್ಟೆ ಬೆಲೆಯು ಸಾವಿರಪಟ್ಟು ಹೆಚ್ಚಾಗಿದೆ.

## ಕಾರ್ಮಿಕರ ಪರಿಸ್ಥಿತಿ

ಗುಜರಾತ್‌ನ ಸಾರ್ವಜನಿಕ ಕೈಗಾರಿಕೆಗಳಲ್ಲಿ 2003–04 ರಲ್ಲಿ 8.24 ಲಕ್ಷ ಉದ್ಯೋಗಿಗಳು ಇದ್ದದ್ದು, 2008–09 ರಲ್ಲಿ 7.89 ಲಕ್ಷ ಉದ್ಯೋಗಳಿಗೆ ಕುಸಿದಿದೆ. ಉದ್ಯೋಗಗಳಲ್ಲಿ ಈ ಕಡಿತಕ್ಕೆ ಮುಖ್ಯ ಕಾರಣವು ರಾಜ್ಯ ಸರಕಾರದ ಖರ್ಚು ಕಡಿಮೆ ಮಾಡುವ ಉದ್ದೇಶದಿಂದ ನೇಮಕಾತಿ ಮೇಲಿನ ನಿರ್ಭಂದ ನೀತಿಯೇ ಕಾರಣವಾಗಿದೆ. ರಾಜ್ಯದ ಒಟ್ಟು ಉತ್ಪನ್ನದ ಬೆಳವಣಿಗೆಯು ಸಂಘಟಿತ ವಲಯದಲ್ಲಿ 2007–08 ರಲ್ಲಿ ಉತ್ತಮ ಅಭಿವೃದ್ಧಿ ಶೇ 8 ಆಗಿದ್ದ ಕಾಲಾವಧಿಯಲ್ಲಿ ಗುಜರಾತ್‌ನ ರಾಜ್ಯದ ಬೆಳವಣಿಗೆಯು ಶೇ 1.6 ಮಾತ್ರವಾಗಿದೆ.

2007–08 ರಲ್ಲಿ ಸಮೀಕ್ಷೆಯ 20 ಪ್ರಮುಖ ರಾಜ್ಯಗಳಲ್ಲಿ ನಿಗದಿತ ಬಂಡವಾಳ ಹೂಡಿಕೆಯಲ್ಲಿ ಪ್ರಥಮ ಸ್ಥಾನದಲ್ಲಿದೆ, ಒಟ್ಟು ಬಂಡವಾಳ ಹೂಡಿಕೆಯಲ್ಲಿ ಎರಡನೇ ಸ್ಥಾನದಲ್ಲಿದೆ, ಒಟ್ಟು ಕಾರ್ಖಾನೆಗಳ ಸಂಖ್ಯೆಯಲ್ಲಿ ನಾಲ್ಕನೆ ಸ್ಥಾನದಲ್ಲಿದೆ. ಆದರೆ ಬಂಡವಾಳ ಮತ್ತು ಕಾರ್ಮಿಕರ ಅನುಪಾತ ದಲ್ಲಿ ಗುಜರಾತ್ 20 ರಲ್ಲಿ 18ನೇ ಸ್ಥಾನ ಪಡೆದಿದೆ.

ಸರಾಸರಿ ಒಂದು ಕಾರ್ಖಾನೆಯ ಬಂಡವಾಳದ ಹೂಡಿಕೆ 1998–99 ರಲ್ಲಿ ರೂ.566.93 ಕೋಟಿಗಳಿದ್ದದ್ದು, 2007–08 ರಲ್ಲಿ ರೂ. 1387.16 ಕೋಟಿಗಳಾಗಿದೆ. ಇದೇ ಕಾಲಾವಧಿಯಲ್ಲಿ ಮೌಲ್ಯ ಸೇರ್ಪಡೆಯೊಂದಿಗೆ ವೇತನದ ಅನುಪಾತವು ಶೇ 3.25 ಕುಸಿದೆ. ಶೇ 11.28 ರಿಂದ ಶೇ 8.25 ಗೆ ಕುಸಿದಿದೆ. ಅಂದರೆ ಕಾರ್ಮಿಕರ ಪಾಲು ಮೌಲ್ಯ ಸೇರ್ಪಡೆಯ ಶೇ 8.5 ರಷ್ಟು ಮಾತ್ರ ಇದೆ. ಇದರ ಅರ್ಥವೇನೆಂದರೆ ಉತ್ಪಾದನಾ ಪ್ರಕ್ರಿಯೆಯಲ್ಲಿ ಆಗಿರುವ ಮೌಲ್ಯ ಸೇರ್ಪಡೆಯಲ್ಲಿ ಕಾರ್ಮಿಕರಿಗೆ ದೊರೆಯುವ ಪಾಲು ಕೇವಲ ಶೇ 8.5 ಆದರೆ ಬಂಡವಾಳಗಾರರ ಪಾಲು ಲಾಭದ ರೂಪದಲ್ಲಿ ಶೇ 91.5 ರಷ್ಟಾಗಿದೆ. ಪ್ರಮುಖ 20 ರಾಜ್ಯಗಳಲ್ಲಿ ಗುಜರಾತ್ ನಿವ್ವಳ ಮೌಲ್ಯ ವೇತನದ ಪಾಲಲ್ಲಿ ಗುಜರಾತ್ 15ನೇ ಸ್ಥಾನವನ್ನು ಪಡೆದಿದೆ. ಕೇರಳ ರಾಜ್ಯವು ವೇತನದ ಪಾಲಿನಲ್ಲಿ ಅತ್ಯಂತ ಮುಂಚೂಣಿ ಸ್ಥಾನವನ್ನು ಶೇ 22.47 ಹಾಗೂ ನಂತರದ ಸ್ಥಾನವನ್ನು ಶೇ 21.89 ವೇತನದ ಪಾಲು ಪಶ್ಚಿಮ ಬಂಗಾಳ ರಾಜ್ಯವು ಪಡೆದಿವೆ.

ಇಡೀ ದೇಶದಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯ ಮಹಿಳಾ ಕಾರ್ಮಿಕರು ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ. ಆದರೆ ಅಂತಹ ಮಹಿಳಾ ಕಾರ್ಮಿಕರ ಸಂಖ್ಯೆಯು ಗುಜರಾತ್‌ನಲ್ಲಿ ದೇಶದ ಸರಾಸರಿಗಿಂತ ಹೆಚ್ಚಿದೆ. ದೇಶದಲ್ಲಿ ಶೇ 95.93 ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದರೆ, ಗುಜರಾತ್‌ನಲ್ಲಿ ಶೇ 97.59 ರಷ್ಟಿದೆ. ಸಂಘಟಿತ ವಲಯದಲ್ಲಿ ದೇಶದಲ್ಲಿ 4.7 ರಷ್ಟಿದ್ದರೆ, ಗುಜರಾತ್‌ನಲ್ಲಿ ಕೇವಲ ಶೇ 2.4 ರಷ್ಟು ಮಾತ್ರ ಅವಕಾಶ ಪಡೆದಿದ್ದಾರೆ. ಕೇರಳದಲ್ಲಿ ಅಸಂಘಟಿತ ವಲಯದಲ್ಲಿ ಶೇ. 81 ಮತ್ತು ಸಂಘಟಿತ ವಲಯದಲ್ಲಿ ಶೇ. 19 ರಷ್ಟು ಮಹಿಳಾ ಕಾರ್ಮಿಕರು ತೊಡಗಿದ್ದೂ ಮುಂಚೂಣಿ ಸ್ಥಾನದಲ್ಲಿದೆ. ಭಾರಿ ತೀವ್ರವಾದ ಅಭಿವೃದ್ಧಿ ಹೊಂದುತ್ತಿರುವ ರಾಜ್ಯವೆಂದು ಹೇಳಿಕೊಳ್ಳುವ ಗುಜರಾತ್ ರಾಜ್ಯವು ಪ್ರಮುಖ 20 ರಾಜ್ಯಗಳ ಪೈಕಿ 11ನೇ ಸ್ಥಾನದಲ್ಲಿದೆ.

ಈಗಾಗಲೇ ಪ್ರಸ್ತಾಪಿಸಿರುವಂತೆ ಕಾಂಗ್ರೇಸ್ ನೇತೃತ್ವದ ಯುಪಿಎ–2 ಸರಕಾರದ

ನವಉದಾರಿಕರಣ ನೀತಿಗಳ ಜಾರಿಯ ಪರಿಣಾಮವಾಗಿ ಉತ್ಪಾದಕತೆ ಹೆಚ್ಚುತ್ತಿದ್ದರೂ ಅದರ ಫಲವನ್ನು ಕಾರ್ಮಿಕರಿಗೆ ನಿರಾಕರಿಸಲಾಗುತ್ತಿದೆ. ಗುಜರಾತ್‌ನಲ್ಲಿ ಕಾರ್ಮಿಕರ ಪರಿಸ್ಥಿತಿಯು ಮತ್ತಷ್ಟು ಹಿನಾಯವಾಗಿದೆ. 2007–08 ರಲ್ಲಿ ಭಾರತದ ಗ್ರಾಮಾಂತರ ಪ್ರದೇಶದಲ್ಲಿ ಪುರುಷ ಕಾರ್ಮಿಕರ ಸರಾಸರಿ ಕೂಲಿಯು ಪ್ರತಿ ದಿನಕ್ಕೆ ರೂ. 75.30 ಪೈಸೆ ಆಗಿದ್ದರೆ, ಗುಜರಾತ್‌ನಲ್ಲಿ ರೂ. 68.53 ಪೈಸೆ ಆಗಿದೆ. ದೇಶದ ಸರಾಸರಿ ಮಹಿಳಾ ಕಾರ್ಮಿಕರಿಗೆ ದಿನಕ್ಕೆ ರೂ.62.26 ಪೈ ಆಗಿದ್ದರೆ, ಗುಜರಾತ್‌ನಲ್ಲಿ ರೂ. 58.97 ಪೈ ಆಗಿದೆ. ಪುರುಷ ಕಾರ್ಮಿಕರ ಕೂಲಿ ಸಂಧರ್ಭದಲ್ಲಿ  ಗುಜರಾತ್‌ನ ಸ್ಥಾನವು 14 ರಲ್ಲಿದ್ದರೆ, ಮಹಿಳಾ ಕಾರ್ಮಿಕರ ಕೂಲಿಯ ವಿಷಯದಲ್ಲಿ 8 ನೇ ಸ್ಥಾನದಲ್ಲಿದೆ.

## ಕಾರ್ಮಿಕ ಕಾನೂನುಗಳ ಅನುಷ್ಠಾನ ಪರಿಸ್ಥಿತಿ

ಸರಕಾರಿ ಹುದ್ದೆಗಳನ್ನು ಭರ್ತಿ ಮಾಡುವುದನ್ನು ನಿಷೇಧ ಮಾಡಿದ ಹಿನ್ನಲೆಯಲ್ಲಿ ಗುಜರಾತ್‌ನ ಕಾರ್ಮಿಕ ಇಲಾಖೆ ಅತ್ಯಂತ ಅಸಮರ್ಥ ಸ್ಥಿತಿ ತಲುಪಿದೆ. ವಿಶ್ವ ಕಾರ್ಮಿಕ ಸಂಘಟನೆ ಪ್ರಕಾರ ಕಾರ್ಖಾನೆಯ ಪರಿಶೀಲನೆಗಾಗಿ ಕನಿಷ್ಟ 232 ಕಾರ್ಮಿಕ ಅಧಿಕಾರಿಗಳ ಅವಶ್ಯಕತೆ ಇದೆ. ಆದರೆ 154 ಹುದ್ದೆಗಳು ಮಾತ್ರ ಅವಕಾಶವಿದ್ದೂ ಅದರಲ್ಲಿ 2010 ರಿಂದ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ಸಂಖ್ಯೆಯು ಕೇವಲ 46 ಮಾತ್ರವಾಗಿದೆ. ಕಾರ್ಖಾನೆಗಳ ಸಂಖ್ಯೆಯು ಹೆಚ್ಚುತ್ತಿದ್ದರೂ ಕಾರ್ಮಿಕ ಅಧಿಕಾರಿಗಳ ಸಂಖ್ಯೆಯು ಶೇ 46 ಕ್ಕಿಂತಲೂ ಕಡಿಮೆ ಇದ್ದಾರೆ. ಹೆಚ್ಚಿನ ಕೈಗಾರಿಕೆಗಳಿರುವ ಸೂರತ್‌ನಂತಹ ಕೈಗಾರಿಕಾ ಪ್ರದೇಶದಲ್ಲಿ 50 ಅಧಿಕಾರಿಗಳ ಅವಶ್ಯಕತೆ ಇದ್ದರೆ, ವಾಸ್ತವದಲ್ಲಿ ಕಾರ್ಯನಿರ್ವಹಿಸುತ್ತಿರುವುದು ಕೇವಲ 6 ಅಧಿಕಾರಿಗಳು ಮಾತ್ರ. ಇದರಿಂದ ಯಾರಿಗಾದರೂ ಗುಜರಾತ್ ರಾಜ್ಯದಲ್ಲಿ ಕಾರ್ಮಿಕ ಕಾನೂನುಗಳ ಅನುಷ್ಠಾನದ ಪರಿಸ್ಥಿತಿ ಹೇಗಿರಬಹುದೆಂಬುದು ಅರ್ಥವಾಗುತ್ತದೆ.

## ಬಾಲ ಕಾರ್ಮಿಕರು

ಇತ್ತೀಚಿಗೆ ಜನವರಿ 2014 ರಲ್ಲಿ ಬಿಡುಗಡೆ ಮಾಡಲಾಗಿರುವ ಎನ್‌ಎಸ್‌ಎಸ್ ವರದಿಯ ಪ್ರಕಾರ ಇಡೀ ದೇಶದಲ್ಲೇ ಗುಜರಾತ್ ರಾಜ್ಯದ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಅತ್ಯಂತ ಹೆಚ್ಚು ಬಾಲ ಕಾರ್ಮಿಕರನ್ನು ದುಡಿಸಲಾಗುತ್ತಿದೆ. ಗುಜರಾತ್‌ನ ಗ್ರಾಮೀಣ ಪ್ರದೇಶಗಳಲ್ಲಿ 5–14 ವಯಸ್ಸಿನ ಮಕ್ಕಳಲ್ಲಿ ಶೇ 4.3 ರಷ್ಟು ಬಾಲ ಕಾರ್ಮಿಕರಾಗಿದ್ದಾರೆ, ಜಾರ್ಖಂಡ್ ಹೊರತು ಪಡಿಸಿ ಇತರ ಎಲ್ಲಾ ಪ್ರಮುಖ ರಾಜ್ಯಗಳಿಗೆ ಹೋಲಿಕೆ ಮಾಡಿದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ರಾಜ್ಯ ಸಭೆಯಲ್ಲಿ ನೀಡಿರುವ ಉತ್ತರದಲ್ಲಿ ನೀಡಿರುವ ಮಾಹಿತಿಯಂತೆ 2009–10 ರಲ್ಲಿ ಗುಜರಾತ್‌ನಲ್ಲಿ 3,90,687 ಬಾಲ ಕಾರ್ಮಿಕರು ದುಡಿಯುತ್ತಿದ್ದಾರೆ. ಈ ಬಾಲ ಕಾರ್ಮಿಕರು ಬಿ.ಟಿ. ಹತ್ತಿ, ಕಬ್ಬು ವ್ಯವಸಾಯದಲ್ಲಿ, ಉಪ್ಪು ತಯಾರಿಕಾ ಕೇಂದ್ರಗಳಲ್ಲಿ, ಊದುಬತ್ತಿ ತಯಾರಿಕೆ, ಗಾರ್ಮೆಂಟ್, ಬೀಡಿ, ಮೀನುಗಾರಿಕೆ, ಕೃಷಿ ಮತ್ತು ಚಿಂದಿ ಆಯುವ ಕೆಲಸಗಳಲ್ಲಿ ಹಿನಾಯ ಪರಿಸ್ಥಿತಿಗಳಲ್ಲಿ ದುಡಿಯುತ್ತಿದ್ದಾರೆ.

## ಮಾನವ ಅಭಿವೃದ್ಧಿ

ಯೋಜನಾ ಆಯೋಗದ ವರದಿಯ ಪ್ರಕಾರ ಬಡತನ ನಿವಾರಣೆಯಲ್ಲಿ 20 ರಾಜ್ಯಗಳ ಸಮೀಕ್ಷೆಯಲ್ಲಿ ಗುಜರಾತ್ 11 ನೇ ಸ್ಥಾನ ಪಡೆದಿದೆ; ಬಡಕಟ್ಟು ಜನತೆಯ ಬಡತನವು ಕಳೆದ ದಶಕದಲ್ಲಿ ಗುಜರಾತ್‌ನಲ್ಲಿ ಹೆಚ್ಚಾಗಿದೆ.

ಗುಜರಾತ್‌ನಲ್ಲಿ ಬಾಲ್ಯಾವ್ಯಸ್ಥೆಯ ಮಕ್ಕಳ ಸಾವುಗಳು 2012 ರ ಮಾಹಿತಿಯಂತೆ 1000 ಮಕ್ಕಳಲ್ಲಿ 38 ಸಾವಾಗುತ್ತಿದೆ. ಆದರೆ ಕೇರಳದಲ್ಲಿ 12, ತಮಿಳನಾಡಲ್ಲಿ 21, ಮಹಾರಾಷ್ಟ್ರದಲ್ಲಿ ಮತ್ತು ದೆಹಲಿಯಲ್ಲಿ 25, ಮತ್ತು ಪಂಜಾಬ್‌ನಲ್ಲಿ 28 ಆಗಿದೆ. ಅಂತರ್‌ರಾಷ್ಟ್ರೀಯ ಆರೋಗ್ಯ ಪತ್ರಿಕೆ 'ಲಾಂಸೆಟ್' ಪ್ರಕಟಿಸಿದ 2001–2010 ವರಗಿನ ಮಕ್ಕಳು ಮತ್ತು ಮಕ್ಕಳ ಸಾವಿನ ಪ್ರಮಾಣ ಕುರಿತ ಅಧ್ಯಯನ ವರದಿ ಪ್ರಕಾರ ಗುಜರಾತ್‌ನಲ್ಲಿ ಮಕ್ಕಳ ಸಾವಿನ ಸಂಖ್ಯೆಯು ಇಡೀ ದೇಶದಲ್ಲೇ ಹೆಚ್ಚಾಗಿದೆ 1000 ಮಕ್ಕಳಲ್ಲಿ 52.2 ರಷ್ಟು ಸಾವುಗಳಾಗುತ್ತಿವೆ. ಹರ‍್ಯಾಣ–49.5, ಆಂದ್ರಪದೇಶ–47.2, ಜಮ್ಮು ಕಾಶ್ಮೀರ– 44.1, ಕರ್ನಾಟಕ–42.6, ಹಿಮಾಚಲ ಪ್ರದೇಶ– 42.5, ಪಂಜಾಬ್–39.9, ಪಶ್ಚಿಮ ಬಂಗಾಳ– 39.6, ಮಹಾರಾಷ್ಟ್ರ–32.6, ತಮಿಳನಾಡು–27.3 ಮತ್ತು ಕೇರಳದಲ್ಲಿ– 13.2. ಗುಜರಾತ್‌ನ ಅರ್ಧದಷ್ಟು ಮಕ್ಕಳು ಕಡಿಮೆ ತೂಕವನ್ನು ಹೊಂದಿದ್ದಾರೆ ಮತ್ತು ಅಪೌಷ್ಟಿಕತೆಯಿಂದ ನರಳುತ್ತಾರೆ. ಶೇಕಡ 55.3ರಷ್ಟು ಮಹಿಳೆಯರು ರಕ್ತಹಿನತೆಗೆ ಒಳಗಾಗಿದ್ದಾರೆ. ಆದರೆ ರಾಜ್ಯ ಸರ್ಕಾರದ ಆರೋಗ್ಯ ಸಂರಕ್ಷಣೆಗೆ ಮಾಡುವ ವೆಚ್ಚ 15 ವರ್ಷಗಳ ಹಿಂದೆ ಶೇ.4.5 ಇದ್ದದ್ದು ಶೇ.0.77ರಷ್ಟಕ್ಕೆ ತೀವ್ರ ಕಡಿತವನ್ನು ಮಾಡಲಾಗಿದೆ. ಗುಜರಾತಿನ ಅಭಿವೃದ್ಧಿ ಮಾದರಿಯು ದಲಿತರು ಮತ್ತು ಪೌರ ಸೇವೆಗಳಲ್ಲಿ ತೊಡಗಿರುವ ಕಾರ್ಮಿಕರಿಗೆ ಯಾವುದೇ ರೀತಿಯ ಪ್ರಯೋಜನವಾಗಿರುವುದಿಲ್ಲ. ಜನಗಣತಿಯ ಮಾಹಿತಿ ಪ್ರಕಾರ ಈಗಲೂ ಸಾವಿರಾರು ಮನೆಗಳಲ್ಲಿ ಕೈಯಿಂದ ಮಲ ಎತ್ತುವ ವಿಧಾನ ಜಾರಿಯಲ್ಲಿದೆ. ಸರ್ಕಾರದ ಅಂಕಿ ಅಂಶಗಳ ಪ್ರಕಾರವೇ 2007ರ ವರೆಗೆ 64 ಸಾವಿರ ಜನ ಇಂತಹ ಕೆಲಸದಲ್ಲಿ ತೊಡಗಿದ್ದಾರೆ. ಅಹಮಾಬಾದ್ ನಗರದಲ್ಲಿ 126 ಕಡೆ ಭೌತಿಕವಾಗಿ ಮಲ ಎತ್ತುವ ಪದ್ಧತಿ ಹಲವು ವರ್ಷಗಳಿಂದ ಮುಂದುವರಿಯುತ್ತಿದೆ.

## ಕಾಂಗ್ರೆಸ್ ಮತ್ತು ಬಿಜೆಪಿ ಒಂದೇ ನಾಣ್ಯದ ಎರಡು ಮುಖಗಳು

ನವ ಉದಾರೀಕರಣ ನೀತಿಗಳು ಮತ್ತು ದೊಡ್ಡ ವ್ಯಾಪಾರಸ್ತರ ಪರವಾದ ದೋರಣೆಗಳ ವಿಷಯದಲ್ಲಿ ಕಾಂಗ್ರೇಸ್ ಮತ್ತು ಬಿಜೆಪಿ ಅಥವ ರಾಹುಲ್‌ಗಾಂಧಿ ಮತ್ತು ನರೇಂದ್ರಮೋದಿ ಇವರುಗಳ ನಡುವೆ ಯಾವುದೇ ವ್ಯತ್ಯಾಸವಿಲ್ಲ. ಈ ಎರಡು ಪಕ್ಷಗಳು ಅವರ ಚುನಾವಣಾ ಪ್ರಚಾರಗಳ ತಯಾರಿಯನ್ನು ದೊಡ್ಡ ಕೈಗಾರಿಕಾ ಸಂಘಟನೆಗಳು ವ್ಯವಸ್ಥೆ ಮಾಡಿದ ಸಭೆಗಳಲ್ಲಿ ಸದರಿ ವ್ಯಾಪಾರಸ್ಥರ ಹಿತ ಕಾಪಾಡುವ ಬಗ್ಗೆ ಭರವಸೆಗಳನ್ನು ನೀಡಿ ಆರಂಭಿಸಲಾಯಿತು.

ಕೇಂದ್ರದಲ್ಲಾಗಲಿ ರಾಜ್ಯದಲ್ಲಾಗಲಿ ಅಧಿಕಾರದಲ್ಲಿರುವ ಎರಡು ಪಕ್ಷಗಳ ಹೇಳಿಕೆಗಳು ಮತ್ತು ಆಚರಣೆ ವಿಚಾರದಲ್ಲಿ ನವ ಉದಾರೀಕರಣ ನೀತಿಗಳ ಜಾರಿಯ ಬಗ್ಗೆ ಅವರ ಬದ್ಧತೆ ಒಂದೇ ರೀತಿಯಲ್ಲಿ ಇದೆ. ಮತ್ತು ಸದರಿ ನೀತಿಗಳನ್ನು ಜನರ ಮೇಲೆ ಹೇರುವುದರಿಂದ ಕಾರ್ಮಿಕರು ಮತ್ತು ಸಾಮಾನ್ಯ ಜನ ಹೊರಲಾರದ ಭಾರಗಳಿಂದ ಸಂಕಷ್ಟಕ್ಕೆ ಹಿಡಾಗಿದ್ದಾರೆ.

## ನಿಜವಾದ ಪರಿಯರ್ಾಯ

ವಿಶ್ವದಾದ್ಯಂತ ಅನುಭವವನ್ನು ಪರಿಗಣಿಸಿದರೆ ನವ ಉದಾರೀಕರಣ ನೀತಿಗಳ ಭಾಗವಾಗಿರುವ ಖಾಸಗೀಕರಣ, ಉದಾರೀಕರಣ, ಮತ್ತು ಜಾಗತೀಕರಣ ಅನುಷ್ಠಾನದಿಂದ ಕಾರ್ಮಿಕರ ಮತ್ತು ಜನಸಾಮಾನ್ಯರ ಜೀವನದ ಪರಿಸ್ಥಿತಿಗಳನ್ನು ಉತ್ತಮ ಪಡಿಸಲು ಸಾಧ್ಯವಿಲ್ಲವೆಂಬು ಸಾಬೀತಾಗಿದೆ. ನಿಜವಾಗಿ ಕಾರ್ಮಿಕರ ಮತ್ತು ಜನಸಾಮಾನ್ಯರರ ಜೀವನ ಪರಿಸ್ಥಿತಿಗಳನ್ನು ಉತ್ತಮ ಪಡಿಸಬೇಕಾದರೆ ಇಂತಹ ನೀತಿಗಳ ಪಥದಿಂದ ಬಲವಾದ ನೀತಿಗಳನ್ನು ರೂಪಿಸುವುದು ಅಗತ್ಯವಾಗಿದೆ.

ಸಿಪಿಐ(ಎಂ) ಮತ್ತು ಎಡಪಕ್ಷಗಳು ಮಾತ್ರ ನಿರಂತರವಾಗಿ ಕಾರ್ಮಿಕ ವರ್ಗದ ಹಕ್ಕು ಮತ್ತು ರಕ್ಷಣೆಗಾಗಿ ಕಾರ್ಮಿಕರ ಹೋರಾಟಗಳಿಗೆ ಪಾರ್ಲಿಮೆಂಟ್‌ನಿನ ಒಳಗೆ ಮತ್ತು ಹೊರಗೆ ಬೆಂಬಲವನ್ನು ನೀಡಿ ಜನಪರವಾದ ಮತ್ತು ಕಾರ್ಮಿಕರ ಪರವಾದ ನೀತಿಗಳ ಪರಿಯರ್ಾಯಕ್ಕಾಗಿ ಕಾರ್ಪೋರೇಟ್ ಸಂಸ್ಥೆಗಳ ಪರವಾಗಿರುವ ನವ ಉದಾರೀಕರಣ ನೀತಿಗಳ ವಿರುದ್ಧ ಶ್ರಮಿಸುತ್ತಾ ಬಂದಿವೆ.

ಪಶ್ಚಿಮ ಬಂಗಾಳದಲ್ಲಿ ಎಡರಂಗ ಸರ್ಕಾರದ ಕೇಂದ್ರದಲ್ಲಿ ಎಡ ಪ್ರಜಾಪ್ರಭುತ್ವ ರಂಗ ಸರ್ಕಾರ ಮತ್ತು ಹಾಲಿ ತ್ರಿಪುರದಲ್ಲಿರುವ ಎಡರಂಗ ಸರ್ಕಾರ ಬಹಳ ಸ್ಪಷ್ಟವಾಗಿ ಕಾರ್ಮಿಕರ ಹೋರಾಟಗಳ ಸಂದರ್ಭದಲ್ಲಿ ಪೋಲಿಸರನ್ನು ಬಳಸುವುದನ್ನು ನಿರಾಕರಿಸಲಾಗಿದೆ. ಕಾರ್ಮಿಕ ವರ್ಗದ ಸಂಘಟನಾ ಮತ್ತು ಸಾಮೂಹಿಕ ಚೌಕಾಸಿ ಹಕ್ಕುಗಳನ್ನು ಮತ್ತು ಮುಷ್ಕರದ ಹಕ್ಕನ್ನು ಎತ್ತಿ ಹಿಡಿಯಲಾಗಿದೆ. ಈ ಸರ್ಕಾರಗಳು ನವ ಉದಾರೀಕರಣ ಸುಧಾರಣೆಗಳ ಪರಿಣಾಮಗಳ ವಿರುದ್ಧ ಕಾರ್ಮಿಕರು ನಡೆಸುವ ಹೋರಾಟಗಳಿಗೆ ಬೆಂಬಲವನ್ನು ನೀಡುತ್ತಾ ಬಂದಿವೆ. ಈ ಮೂರು ರಾಜ್ಯ ಸರ್ಕಾರಗಳ ಸೀಮಿತವಾದಂತ ಸಂಪನ್ಮೂಲಗಳ ಮತ್ತು ಅಧಿಕಾರಗಳ ನಡುವೆಯೂ ಕಾರ್ಮಿಕರ ಜೀವನ ಪರಿಸ್ಥಿತಿಗಳನ್ನು ಉತ್ತಮ ಪಡಿಸಲು ಮತ್ತು ಹಲವು ಕಾರ್ಮಿಕ ಕಲ್ಯಾಣಗಳ ಯೋಜನೆಗಳನ್ನು ಜಾರಿಗೊಳಿಸಲು ಪ್ರಯತ್ನಿಸಲಾಗಿದೆ.

16ನೇ ಲೋಕಸಭೆಯಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳ ಬಲ ಹೆಚ್ಚಾಗುವುದರಿಂದ ಕಾರ್ಮಿಕ ವರ್ಗದ ಹೋರಾಟ ಬಲಗೊಳಿಸಲು ಕಾರ್ಮಿಕರ ಜೀವನ ಪರಿಸ್ಥಿತಿಗಳನ್ನು ಉತ್ತಮಪಡಿಸಲು ಮತ್ತು ದೊಡ್ಡ ರಾಷ್ಟ್ರೀಯ ಮತ್ತು ಬಹುರಾಷ್ಟ್ರೀಯ ಬಂಡವಾಳಗಾರರ ವಿರುದ್ಧ ಹೋರಾಟಗಳನ್ನು ಬಲಪಡಿಸಲು ಸಹಕಾರಿಯಾಗುತ್ತದೆ. ಕಾರ್ಮಿಕ ವರ್ಗದ ಧ್ವನಿ ಪಾರ್ಲಿಮೆಂಟ್‌ನಲ್ಲಿ ಹೆಚ್ಚಾಗುವುದರಿಂದ ದೊಡ್ಡ ವ್ಯಾಪಾರಸ್ಥರ ಮತ್ತು ಕಾರ್ಪೋರೇಟ್ ಸಂಸ್ಥೆಗಳ ಜನವಿರೋಧಿ ನೀತಿಗಳನ್ನು ಹಿಮ್ಮೆಟಿಸಲು ಮತ್ತು ಪಾರ್ಲಿಮೆಂಟ್‌ನಲ್ಲಿ ಕಾರ್ಮಿಕ ವರ್ಗದ ಧ್ವನಿ ಮೊಳಗಿಸಲು ಸಹಾಯವಾಗುತ್ತದೆ.

ಸಿಪಿಐ(ಎಂ) ಪಕ್ಷದ ಪ್ರಣಾಳಿಕೆಯಲ್ಲಿ ಕಾರ್ಮಿಕರ ಕುರಿತು ಕೆಳಗಿನ ಅಂಶಗಳಿಗೆ ಒತ್ತು ನೀಡಲಾಗಿದೆ.

■ ಕನಿಷ್ಠ ವೇತನ ತಿಂಗಳಿಗೆ 10,000 ಕ್ಕಿಂತಲೂ ಕಡಿಮೆ ಇರಬಾರದು. ಗ್ರಾಹಕರ ಬೆಲೆ ಸೂಚ್ಯಂಕ್ಕೆ ಹೊಂದಿಕೊಂಡಂತೆ ನಿಗದಿಯಾಗಬೇಕು. ವೇತನ ನಿಗದಿಯು 15ನೇ

ಭಾರತ ಕಾರ್ಮಿಕ ಸಮ್ಮೇಳನ ಶಿಫಾರಸ್ಸುಗಳ ಆಧಾರದಲ್ಲಿ ಮತ್ತು ರಪ್ತಕೋಸ್‌ಬ್ರಟ್ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ತೀರ್ಪು ಸೂಚಿಸಿದ ಅಂಶಗಳು ಒಳಗೊಂಡು ಬೆಲೆ ಸೂಚ್ಯಂಕದ ಗಣತಿ ಸೂಕ್ತ ಪುನರ್‌ರಚಿತವಾದ ಆಧಾರದಲ್ಲಿ ನಿಗದಿಯಾಗಬೇಕು.

- ಅಂತರಾಜ್ಯ ವಲಸೆ ಕಾರ್ಮಿಕರ ಕಾನೂನು ಒಳಗೊಂಡತೆ ಎಲ್ಲಾ ಕಾರ್ಮಿಕ ಕಾನೂನುಗಳನ್ನು ಕಠಿಣವಾಗಿ ಅನುಷ್ಠಾನಗೊಳಿಸಬೇಕು.
- ಗುತ್ತಿಗೆ ಪದ್ಧತಿ ಮತ್ತು ಕ್ಯಾಜಿಯೋಲ್ ಪದ್ಧತಿಯಲ್ಲಿ ಕೆಲಸ ನಿರ್ವಹಿಸುವುದನ್ನು ಪ್ರೋತ್ಸಾಹಿಸಬಾರದು, ಗುತ್ತಿಗೆ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾನೂನು ಕಟ್ಟುನಿಟ್ಟಿನ ಜಾರಿಗೊಳಿಸಬೇಕು, ಗುತ್ತಿಗೆ ಕಾರ್ಮಿಕರಿಗೆ ಖಾಯಂ ಕಾರ್ಮಿಕರಿಗೆ ಸಮಾನಾದ ವೇತನ ಮತ್ತು ಸೌಲಭ್ಯಗಳನ್ನು ಜಾರಿಗೊಳಿಸಬೇಕು.
- ಕಾರ್ಮಿಕ ಇಲಾಖೆಯನ್ನು ಬಲಪಡಿಸಬೇಕು, ಕಾನೂನು ಜಾರಿ ಇಲಾಖೆಗಳಾಗಿರುವ ಕಾರ್ಮಿಕ ಮತ್ತು ಕಾರ್ಖಾನೆ ನಿರೀಕ್ಷಕರುಗಳ ಕಛೇರಿಗಳನ್ನು ಸೂಕ್ತ ಅಗತ್ಯವಿರುವ ನೌಕರರನ್ನು ನೇಮಕ ಮಾಡಬೇಕು, ಖಾಲಿ ಹುದ್ದೆಗಳನ್ನು ಭರ್ತಿಮಾಡಬೇಕು, ಕಾರ್ಮಿಕ ನ್ಯಾಯಾಲಯ/ಟೀಮಿನಲ್‌ಗಳಲ್ಲಿ ಖಾಲಿ ಇರುವ ನ್ಯಾಯಮೂರ್ತಿಗಳು ಮತ್ತು ಸಿಬ್ಬಂದಿ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು.
- ಅಸಂಘಟಿತ ಕಾರ್ಮಿಕರ ರಾಷ್ಟ್ರೀಯ ನಿಧಿಯನ್ನು ಅಗತ್ಯ ಹಣಕಾಸಿನ ನೆರವಿನೊಂದಿಗೆ ಸ್ಥಾಪಿಸಬೇಕು, ಬಡತನ ರೇಖೆಯ ಲೆಕ್ಕಾಚಾರಗಳನ್ನು ಬದಿಗಿಟ್ಟು ಎಲ್ಲಾ ಅಸಂಘಟಿತ ಕಾರ್ಮಿಕರನ್ನು ಸಾರ್ವತ್ರಿಕವಾಗಿ ಒಳಗೊಳಿಸಬೇಕು, ಕನಿಷ್ಟ ಸಾಮಾಜಿಕ ಭದ್ರತೆಯ ಸೌಲಭ್ಯಗಳು ಅಂದರೆ ವೃದ್ದಾಪ್ಯ ವೇತನ, ಆರೋಗ್ಯ, ಹೆರಿಗೆ ಭತ್ಯೆ, ಮಕ್ಕಳ ಆರೈಕೆ, ಅಪಘಾತ, ಮತ್ತು ಜೀವವಿಮೆ ಒಳಗೊಂಡಿರಬೇಕು.
- ಪಿಎಫ್‌ಆರ್‌ಡಿಎ ಕಾನೂನು ಮತ್ತು ಹೊಸ ರಾಷ್ಟ್ರೀಯ ಪಿಂಚಣಿ ಯೋಜನೆಯನ್ನು ರದ್ದುಗೊಳಿಸಬೇಕು, ಖಚಿತವಾದ ಪಿಂಚಣಿ ನೀಡುವ ಯೋಜನೆಯನ್ನು ಮಾಲೀಕರಿಂದ ಸೂಕ್ತ ದೇಣಿಗೆ ಮತ್ತು ಸರ್ಕಾರದಿಂದ ಅಗತ್ಯ ನೆರವು ಒಳಗೊಂಡು ಕಾರ್ಮಿಕರು ಮತ್ತು ನೌಕರರಿಗೆ ಖಚಿತ ಪಿಂಚಣಿ ಜಾರಿಗೊಳಿಸಬೇಕು. ಕೊನೆ ತಿಂಗಳ ಸಂಬಳದ ಅರ್ಧದಷ್ಟು ಮಾಸಿಕ ಪಿಂಚಣಿಯಾಗಿ ಪಾವತಿಯಾಗಬೇಕು ಮತ್ತು ಬೆಲೆ ಸೂಚ್ಯಂಕಕ್ಕೆ ಅನುಸಂಧಾನ ಮಾಡಬೇಕು.
- ರಾಜ್ಯ ಮತ್ತು ಕೇಂದ್ರ ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಗುತ್ತಿಗೆ ಕಾರ್ಮಿಕರನ್ನು ಖಾಯಂಗೊಳಿಸಬೇಕು, ಗ್ರಾಮೀಣ ಡಾಕ್ ಸೇವಕರುಗಳನ್ನು ಖಾಯಂಗೊಳಿಸಬೇಕು, ಗುಪ್ತ ಮತದಾನದ ಮೂಲಕ ಕಾರ್ಮಿಕ ಸಂಘಗಳಿಗೆ ಮಾನ್ಯತೆ ನೀಡಬೇಕು, ಕಾರ್ಮಿಕರ ಸಂಘಗಳ ಹಕ್ಕಿಗೆ ರಕ್ಷಣೆ ನೀಡಬೇಕು, ಸಂಘಗಳ ಮಾನ್ಯತೆಯನ್ನು ಕಾನೂನು ಬದ್ಧವಾಗಿ ಎಲ್ಲಾ ಕೈಗಾರಿಕೆಗಳಲ್ಲಿ ಕಡ್ಡಾಯಗೊಳಿಸಬೇಕು. ಐಎಲ್‌ಓ ಠರಾವು ಸಂಖ್ಯೆ: 87 ಮತ್ತು 98ಗಳು ಸಂಘಟನಾ ಸ್ವಾತಂತ್ರ್ಯ ಮತ್ತು ಸಾಮೂಹಿಕ ಚೌಕಾಸಿ ಹಕ್ಕುಗಳನ್ನು ಅನುಮೋದಿಸಬೇಕು.

- ಸರ್ಕಾರದ ಯೋಜನೆಗಳಾದ ಅಂಗನವಾಡಿ, ಆಶಾ, ಬಿಸಿಯೂಟ, ಪ್ಯಾರಾಟೀಚರ್ಸ್, ಎನ್‌ಸಿಎಲ್‌ಪಿ ಸಿಬ್ಬಂದಿಗಳನ್ನು ಕಾರ್ಮಿಕರು ಎಂದು ಮಾನ್ಯತೆ ನೀಡಬೇಕು, 45ನೇ ಭಾರತ ಕಾರ್ಮಿಕ ಸಮ್ಮೇಳನ ಈ ದಿಶೆಯಲ್ಲಿ ಶಿಫಾರಸ್ಸುಗಳನ್ನು ಅಂಗೀಕರಿಸಬೇಕು. ಸದರಿ ಕಾರ್ಮಿಕರಿಗೆ ಕನಿಷ್ಠ ವೇತನ ಸಾಮಾಜಿಕ ಭದ್ರತಾ ಸೌಲಭ್ಯಗಳಾದ ಪಿಂಚಣಿ, ಗ್ರಾಚ್ಯುಟಿ ಪಾವತಿ ಮಾಡಬೇಕು ಮತ್ತು ಕಾರ್ಮಿಕರ ಸಂಘಟನಾ ಹಕ್ಕನ್ನು ಖಚಿತಪಡಿಸಬೇಕು.
- ಎಲ್ಲಾ ಮಹಿಳಾ ಕಾರ್ಮಿಕರು ಮತ್ತು ನೌಕರಿರಿಗೆ ಸಮಾನ ವೇತನ ಜಾರಿಗೊಳಿಸಬೇಕು, ಹೆರಿಗೆ ಸೌಲಭ್ಯ, ಶಿಶುಪಾಲನಾ ಕೇಂದ್ರದ ವ್ಯವಸ್ಥೆ ಒದಗಿಸಬೇಕು.
- ಮಹಿಳಾ ಕಾರ್ಮಿಕರಿಗೆ ಸುರಕ್ಷಿತವಾದ ಕೆಲಸದ ಪರಿಸ್ಥಿತಿಗಳನ್ನು ಖಚಿತಪಡಿಸಬೇಕು, ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ತಪ್ಪಿಸಲು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು, ಕೆಲಸದ ಸ್ಥಳಗಳಲ್ಲಿ ಮತ್ತು ಪ್ರಾದೇಶಿಕವಾಗಿ ಲೈಂಗಿಕ ಕಿರುಕುಳ ವಿರೋಧಿ ಸಮಿತಿಗಳನ್ನು ಕಾನೂನುಬದ್ಧವಾಗಿ ರಚಿಸಿ ಕ್ರಿಯಾಶೀಲಗೊಳಿಸಬೇಕು.
- ಮೀನುಗಾರರು ಮತ್ತು ಮೀನು ಕಾರ್ಮಿಕರಿಗೆ ಪ್ರತ್ಯೇಕ ಕಲ್ಯಾಣ ಮಂಡಳಿಗಳನ್ನು ರಚಿಸಬೇಕು. ವಿದೇಶಿ ಮೀನುಗಾರಿಕೆಯನ್ನು ರದ್ದುಗೊಳಿಸಬೇಕು, ಮೀನುಗಾರರು ಮತ್ತು ಮೀನು ಕಾರ್ಮಿಕರಿಗೆ ಗುರುತಿನ ಚೀಟಿ ನೀಡಿ ಸಾಮಾಜಿಕ ಭದ್ರತಾ ಯೋಜನೆಗಳನ್ನು ಜಾರಿಗೊಳಿಸಬೇಕು.

ಎಲ್ಲಾ ದುಡಿಯುವ ಪುರಷರು ಮತ್ತು ಮಹಿಳೆಯರು ಸಿಪಿಐ(ಎಂ) ಅಭ್ಯರ್ಥಿಗಳಿಗೆ ಮತ್ತು ಎಡಪಕ್ಷಗಳ ಅಭ್ಯರ್ಥಿಗಳಿಗೆ ಮತ ನೀಡಿ ಪಾರ್ಲಿಮೆಂಟ್‌ನಲ್ಲಿ ಎಡಶಕ್ತಿಗಳ ಬಲವನ್ನು ಹೆಚ್ಚಿಸಲು ಮನವಿ ಮಾಡುತ್ತೇವೆ. ಆ ಮೂಲಕ ನವಉದಾರೀಕರಣ ನೀತಿಗಳ ವಿರುದ್ಧ ಪಾರ್ಲಿಮೆಂಟಿನ ಹೊರಗೂ ಮತ್ತು ಒಳಗೂ ಹೋರಾಟವನ್ನು ತೀವ್ರಗೊಳಿಸಲು ಸಹಕಾರ ನೀಡಬೇಕೆಂದು ಮನವಿ ಮಾಡುತ್ತೇವೆ.

ಅನುವಾದ: **ಎಸ್. ಪ್ರಸನ್ನಕುಮಾರ್**

# ಕಾಂಗ್ರೆಸನ್ನು ತಿರಸ್ಕರಿಸಿ,
# ಬಿಜೆಪಿಯನ್ನು ಸೋಲಿಸಿ
# ಸಿಪಿಐ(ಎಂ)ಗೆ ಮತ ನೀಡಿ

# ಒಂದು ಜಾತ್ಯಾತೀತ ಮತ್ತು
# ಪ್ರಜಾಸತ್ತಾತ್ಮಕ ಪರ್ಯಾಯಕ್ಕಾಗಿ
# ಎಡಪಕ್ಷಗಳನ್ನು ಬಲಪಡಿಸಿ

ಬೆಲೆ : ರೂ. 5.00

ಮೂಲ:
ಸಿಪಿಐ(ಎಂ) ಕೇಂದ್ರ ಸಮಿತಿ, ನವದೆಹಲಿ

ಪ್ರಕಟಣೆ:
ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)
ಕರ್ನಾಟಕ ರಾಜ್ಯ ಸಮಿತಿ
ನಂ. 37/ಎ, 8ನೇ ಅಡ್ಡರಸ್ತೆ, ಮಹಾಲಕ್ಷ್ಮಿ ಲೇಔಟ್, ಬೆಂಗಳೂರು – 560086

ಮುದ್ರಣ: ಕ್ರಿಯಾ, ಎಸ್.ಆರ್. ನಗರ, ಬೆಂಗಳೂರು ಪ್ರತಿಗಳು: 3,000